**M.V.C.No.98/2024** **PW-1**

<u>ದಿನಾಂಕಃ **13/02/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ **2**ನೇ ಎದುರುದಾರರ ಪರವಾಗಿ ಶ್ರೀ ಯು.ಎಂ.ಸಿ. ವಕೀಲರಿಂದಃ</u>

1. ನಾನು ಚಲಾಯಿಸುತ್ತಿದ್ದ ಮೋಟಾರ ಸೈಕಲ್ ನನ್ನ ಭಾವ ಸಂತೋಷ್ ರವರಿಗೆ ಸೇರಿರುತ್ತದೆ. ನಾನು ವಾಹನ ಚಾಲನಾ ಪರವಾನಗೆ ಪಡೆದಿರುತ್ತೇನೆ. ನನ್ನ ವಾಹನಕ್ಕೆ ವಿಮೆ ಇತ್ತು. ಚಾಲನಾ ಪರವಾನಗೆ, R.C ಹಾಗೂ ವಿಮೆ ಪಾಲಿಸಿಗಳನ್ನು ನಾನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತ ಆದ ತಕ್ಷಣ ಅರಕಲಗೂಡು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ವೈದ್ಯರಿಗೆ ಅರಕಲಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಯಾವ ರೀತಿ ಗಾಯಗಳು ಆದವು ಎಂಬುದನ್ನು ತಿಳಿಸಿರುತ್ತೇನೆ. ದಿಃ 01-11-2023 ರಂದು ದೂರು ನೀಡಲಾಗಿದೆ. ನಾನೇ ಸೈಕಲ್ ನಲ್ಲಿ ಹೋಗುವಾಗ ಸ್ವತಃ ಬಿದ್ದು ಅಪಘಾತ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಟ್ರ್ಯಾಕ್ಟರ್ ಟ್ರೇಲರ್ ಯಾರ ಮಾಲಿಕತ್ವಕ್ಕೆ ಒಳಪಟ್ಟಿರುತ್ತದೆ ಎಂದು ಗೊತ್ತಿಲ್ಲ. ಟ್ರ್ಯಾಕ್ಟರ್ ಚಾಲಕನಿಗೆ ಚಾಲನಾ ಪರವಾನಗೆ ಹಾಗೂ ಟ್ರೇಲರಿಗೆ ವಿಮೆ ಇರಲಿಲ್ಲ ಎಂಬ ವಿಷಯ ನನಗೆ ಗೊತ್ತಾಗಿರುತ್ತದೆ. ನಿಪಿ-7 ರಿಂದ 58 ರ ಮೆಡಿಕಲ್ ಬಿಲ್ಲುಗಳನ್ನು ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ವೈದ್ಯರು ಫಿಜಿಯೋತೆರಪಿ ಮಾಡಿಕೊಳ್ಳಬೇಕು ಹಾಗೂ ಮುಂದುವರೆದ ಚಿಕಿತ್ಸೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದರು ಎಂದರೆ ಸರಿ. ನಾನು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ X-ray ಮಾಡಿಸಿರುತ್ತೇನೆ. ಆದರೆ X-ray ಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಚಿಕಿತ್ಸೆ ಪಡೆದಿರುವ ಸಂಬಂಧ ಯಾವುದೇ ದಾಖಲಾತಿಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿಲ್ಲಿ ಯಾವುದೇ ಜಮೀನುಗಳು ಇರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಇವೆ. ನನ್ನ ತಂದೆ ಹೆಸರಿನಲ್ಲಿರುವ ದಾಖಲಾತಿಗಳನ್ನು ನೀಡಿಲ್ಲ. ನಾನು ಹಾಲು ವ್ಯಾಪಾರ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನನಗೆ ಆದ ಗಾಯಗಳು ಸಂಪೂರ್ಣವಾಗಿ ಗುಣವಾಗಿವೆ ಎಂದರೆ ಸರಿಯಲ್ಲ. ಟ್ರೇಲರ್ ಗೆ ವಿಮೆ ಇಲ್ಲದ ಕಾರಣ ಹಾಗೂ ಚಾಲಕನಿಗೆ ಚಾಲನಾ ಪರವಾನಗೆ ಇಲ್ಲದೇ ಇದ್ದ ಕಾರಣ 2ನೇ ಎದುರುದಾರರ ವಿಮಾ ಸಂಸ್ಥೆಯವರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u>

1ನೇ ಎದುರುದಾರರ ಪರವಾಗಿ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದುಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು